ಜನರನ್ನು ಕಚೇರಿಗೆ ಅಲೆಸಬೇಡಿ

ಶಾಸಕ ಸಿಪಿ ಯೋಗೇಶ್ವರ್ | ಇ-ಸ್ವತ್ತು ಆಂದೋಲನ, ಸಾರ್ವಜನಿಕ ಕುಂದುಕೊರತೆ ಸಭೆ

• **ಕನ್ನಡಪ್ರಭ ವಾರ್ತೆ** ಚನ್ನಪಟ್ಟಣ

ಕಾಲಕಾಲಕ್ಕೆ ಜನಸಂಪರ್ಕ ಸಭೆ, ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ ಜನರ ಅಹವಾಲು ಆಲಿಸಿದ್ದರೆ ಜನ ಇಂದು ಇಷ್ಟೊಂದು ಸಮಸ್ಯೆಗಳನ್ನು ಹೊತ್ತು ತರುತ್ತಿರಲಿಲ್ಲ. ಇನ್ನು ಮುಂದಾದರೂ ಅಧಿಕಾರಿಗಳು ಆದ್ಯತೆಯ ಮೇಲೆ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ವಹಿಸಬೇಕು ಎಂದು ಶಾಸಕ ಸಿ.ಪಿ.ಯೋಗೇಶ್ವರ್‌ತಾಕೀತು ಮಾಡಿದರು.

ತಾಲೂಕಿನ ಬೇವೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಮಾಕಳಿ, ದಶವಾರ, ನಾಗವಾರ ಹಾಗೂ ಬೇವೂರು ಗ್ರಾಮ ಪಂಚಾಯಿತಿಗಳಲ್ಲಿ ಇ- ಸ್ವತ್ತು ಆಂದೋಲನ ಹಾಗೂ ಸಾರ್ವಜನಿಕರ ಕುಂದು ಕೊರತೆ, ಅಹವಾಲು ಸಲ್ಲಿಕೆಯ ಎರಡನೇ ದಿನದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಾರ್ವಜನಿಕರ ಸಮಸ್ಯೆ ಆಲಿಸಿದ ಅವರು ಮಾತನಾಡಿದರು.

ಎರಡು ದಿನದಿಂದ ನಡೆಸುತ್ತಿರುವ ಕುಂದುಕೊರತೆ ಸಭೆಯಲ್ಲಿ ಜನ ಸಾಕಷ್ಟು ಸಮಸ್ಯೆಗಳನ್ನು ಹೊತ್ತು ತರುತ್ತಿದ್ದಾರೆ. ಇವುಗಳಲ್ಲಿ ಕೆಲವು ಸಣ್ಣಪುಟ್ಟ ಸಮಸ್ಯೆಗಳಾಗಿದ್ದು, ಅಧಿಕಾರಿಗಳು ಸ್ವಲ್ಪ ಗಮನ ಹರಿಸಿದರೆ, ತಮ್ಮ ಹಂತದಲ್ಲೇ ಪರಿಹರಿಸ ಬಹುದಾಗಿದೆ. ಇನ್ನಾದರೂ ಅಧಿಕಾರಿಗಳು ಜನರನ್ನು ಕಚೇರಿಗೆ ಅಲೆದಾಡಿಸುವುದನ್ನು ಬಿಟ್ಟು ಜನ ಕೆಲಸಗಳನ್ನು ತ್ವರಿತವಾಗಿ ಮಾಡಲು ಕಾರ್ಯ ಪ್ರವೃತರಾಗಬೇಕು ಎಂದು ಸೂಚಿಸಿದರು.

ಕಳೆದ ಆರೇಳು ವರ್ಷಗಳಿಂದ ಕ್ಷೇತ್ರದ ಜನಪ್ರತಿನಿಧಿಯಾದವರು ಗ್ರಾಮ ಪಂಚಾಯಿತಿ ಮಟ್ಟಕ್ಕೆ ತೆರಳಿ ಸಮಸ್ಯೆಗಳನ್ನು ಆಲಿಸಿದ ಪರಿಣಾಮ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಹತ್ತಾರು ಸಮಸ್ಯೆಗಳನ್ನು ಹೇಳಿಕೊಂಡು ನಮ್ಮ ಬಳಿ ಬರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದಕ್ಕೆಲ್ಲಾ ಫುಲ್‌ಸ್ಟಾಪ್ ಇಡುವ ಕೆಲಸವನ್ನು ಅಧಿಕಾರಿ ವರ್ಗ ಮಾಡಲೇಬೇಕು ಎಂದು ತಾಕೀತು ಮಾಡಿದರು.

ಮಾಕಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ನಾಲ್ಕು ಸಾವಿರ ಎಕರೆಗೂ ಹೆಚ್ಚು ರೈತರ ಭೂಮಿಗೆ ಪಹಣಿ ಇಲ್ಲದಿರುವ ಬಗ್ಗೆ ಅಲ್ಲಿನ ರೈತ ಸಮುದಾಯ ಗಮನಕ್ಕೆ ತರುತ್ತಿದ್ದಂತೆ ಅರಣ್ಯಾಧಿಕಾರಿಗಳನ್ನು ಕರೆಸಿ ಚರ್ಚೆ ನಡೆಸಿದ ಶಾಸಕರು ಹಲವು ವರ್ಷಗಳಿಂದ ರೈತರು ಅನುಭವಿಸುತ್ತಿರುವ ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು.

ಚನ್ನಪಟ್ಟಣ ತಾಲೂಕಿನ ದಶವಾರ ಗ್ರಾಮದಲ್ಲಿ ಇ- ಸ್ವತ್ತು ಆಂದೋಲನ ಹಾಗೂ ಸಾರ್ವಜನಿಕರ ಕುಂದುಕೊರತೆ ಸಭೆಯಲ್ಲಿ ಯೋಗೇಶ್ವರ್‌ಜನರಿಂದ ಅಹವಾಲು ಸ್ವೀಕರಿಸಿದರು.

ಶಾಲಾ ಮಕ್ಕಳ ಜತೆ ಕಾಲ ಕಳೆದ ಸಿಪಿವೈ

ಇದೇ ವೇಳೆ ಶಾಸಕ ಸಿ.ಪಿ.ಯೋಗೇಶ್ವರ್ ಪಟೇಲರ ದೊಡ್ಡಿ ಸರಕಾರಿ ಶಾಲೆಗೆ ಭೇಟಿ ನೀಡಿ ಮಕ್ಕಳ ಜೊತೆ ಕಾಲ ಕಳೆದರು. ಶಾಲೆಯ ಕಟ್ಟಡ ತೀರಾ ಹಳೆಯದಾಗಿರುವ ಕಾರಣ ದುರಸ್ತಿ ಕೈಗೊಳ್ಳಲಾಗಿತ್ತು. ಕಲಿಕೆಗಾಗಿ ಮಕ್ಕಳಿಗೆ ಪಕ್ಕದಲ್ಲಿನ ಅಂಗನವಾಡಿಯಲ್ಲಿ ತರಗತಿಗಳು ನಡೆಯುತ್ತಿರುವ ವಿಚಾರ ತಿಳಿದು ಅಲ್ಲಿಗೆ ತೆರಳಿದ ಶಾಸಕರು ದುರಸ್ತಿ ಕಾರ್ಯ ವೀಕ್ಷಿಸುವುದರ ಜೊತೆಗೆ ಮಕ್ಕಳ ಜತೆ ಕೆಲ ಹೊತ್ತು ಕಾಲ ಕಳೆದರು. ಇದೇ ವೇಳೆ ಬಿಸಿಯೂಟ, ವಿದ್ಯಾಭ್ಯಾಸದ ಬಗ್ಗೆ ಮಾಹಿತಿ ಪಡೆದರು.

ಶಾಲಾ ಕಟ್ಟಡಕ್ಕೆ ಭೂಮಿಪೂಜೆ: ಇದೇ ವೇಳೆ ಮಾಕಳಿ ಗ್ರಾಮದಲ್ಲಿ ಟೊಯೋಟ ಸಂಸ್ಥೆಯ ಸಿಎಸ್‌ಆರ್ ನಿಧಿಯಲ್ಲಿ ನಿರ್ಮಾಣಗೊಳ್ಳಲಿರುವ ಸರಕಾರಿ ಶಾಲಾ ಕಟ್ಟಡ ಕಾಮಗಾರಿಯ ಗುದ್ದಲಿಪೂಜೆಯನ್ನು ಶಾಸಕ ಸಿ.ಪಿ.ಯೋಗೇಶ್ವರ್ ನೆರವೇರಿಸಿದರು. ಈಗಾಗಲೇ ತಾಲೂಕಿನ ಹಲವು ಕಡೆಗಳಲ್ಲಿ ಸುಸಜ್ಜಿತವಾದ ಶಾಲೆಗಳನ್ನು ನಿರ್ಮಿಸಲ ಾಗಿದ್ದು, ಇದರೊಟ್ಟಿಗೆ ಇನ್ನಷ್ಟು ಸಂಸ್ಥೆಗಳ ಸಹಕಾರ ಪಡೆದು ಸರಕಾರಿ ಶಾಲೆಗಳ ಅಭಿವೃದ್ಧಿಗೆ ಮುಂದಾಗ ಲಾಗುವುದು ಎಂದು ಭರವಸೆ ನೀಡಿದರು.

ತಾಪಂ ಇಒ ಸಂದೀಪ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಮಲಿಂಗಯ್ಯ ಸೇರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಮುಖಂಡರು ಹಾಜರಿದ್ದರು.

ಶಾಸಕರ ಸಭೆ

- ಬೇವೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಮಾಕಳಿ, ದಶವಾರ, ನಾಗವಾರ ಹಾಗೂ ಬೇವೂರು ಗ್ರಾಮ ಪಂಚಾಯಿತಿಗಳಲ್ಲಿ ಇ- ಸ್ವತ್ತು ಆಂದೋಲನ ಹಾಗೂ ಸಾರ್ವಜನಿಕರ ಕುಂದು ಕೊರತೆ ಸಭೆ
- ಮಾಕಳಿ ವ್ಯಾಪ್ತಿಯ ರೈತರ ಪಹಣಿ ಸಮಸ್ಯೆಗಳನ್ನು ಬಗೆಹರಿಸಲು ತಾಕೀತು

ಕಾರ್ಯಕರ್ತರಿಗೆ ಧೈರ್ಯ ಹೇಳಿದ ನಿಖಿಲ್

ರಾಮನಗರ, ಚನ್ನಪಟ್ಟಣ ತಾಲೂಕಿನ ಗ್ರಾಮಗಳಿಗೆ ಭೇಟಿ | ಸರ್ಕಾರ ಗ್ಯಾರಂಟಿ ಹೆಸರಲ್ಲಿ ಗಿಮಿಕ್

• **ಕನ್ನಡಪ್ರಭ ವಾರ್ತೆ** ರಾಮನಗರ

ರಾಮನಗರ ಮತ್ತು ಚನ್ನಪಟ್ಟಣ ತಾಲೂಕಿನ ವಿವಿಧ ಗ್ರಾಮದ ಕಾರ್ಯಕರ್ತರು ಹಾಗೂ ಮುಖಂಡರ ಮನೆಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಭೇಟಿ ನೀಡಿದರು.

ರಾಮನಗರ ಜೆಡಿಎಸ್ ಮುಖಂಡರಾದ ಕೆ. ಚಂದ್ರಣ್ಣ ಅವರ ತಾಯಿ ಚನ್ನಮ್ಮ ಅವರ ವೈಕುಂಠ ಸಮಾರಾಧನೆ ಕಾರ್ಯಕ್ರಮ ಮತ್ತು ಸಂತೆ ಮೊಗೇನಹಳ್ಳಿ ಮುಖಂಡರಾದ ಗುಂಡಪ್ಪ ಅವರ ಮನೆಗೆ, ಬೇವೂರು ಗ್ರಾಮದ ಲೈನ್ ಮೆನ್ ಕೆಂಗಲ್ ಅವರ ಮನೆಗೆ ವಳಗೆರೆ ದೊಡ್ಡಿ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದರು.

ನಂತರ ಚನ್ನಪಟ್ಟಣ ತಾಲೂಕಿನ ಇಗ್ಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ನೇರಳೂರು ಗ್ರಾಮದ ಶಿವಪ್ರಕಾಶ್ ಅವರ ನಿವಾಸಕ್ಕೆ ಭೇಟಿ ನೀಡಿ ಅಭಿನಂದನೆ ತಿಳಿಸಿದರು.

ಭಾನುವಾರ ಪಕ್ಷದ ಕಚೇರಿಯಲ್ಲಿ ಸಭೆ: ಪಕ್ಷದ ರಾಜ್ಯಾಧ್ಯಕ್ಷ ಸ್ಥಾನ ಸ್ವೀಕರಿಸುವ ಬಗ್ಗೆ ಸ್ಪಷ್ಟನೆ ನೀಡಿದ ನಿಖಿಲ್, ಇದು ನನಗೂ ಸಹ ಹೊಸ ಸುದ್ದಿ, ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪಕ್ಷದ ಚೌಕಟ್ಟಿನಲ್ಲಿ ಯಾವುದೇ ಚರ್ಚೆ ಆಗಿಲ್ಲ. ಜ. 12ರಂದು ಪಕ್ಷದ ಕಚೇರಿಯಲ್ಲಿ ಸಭೆ ಕರೆಯಲಾಗಿದೆ. ಶಾಸಕರು, ಮಾಜಿ ಶಾಸಕರು, ಮುಖಂಡರು ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಈ ವೇಳೆ ಪಕ್ಷ ಸಂಘಟನೆ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು.

ಜಿಪಂ, ತಾಪಂ ಚುನಾವಣೆಗೆ ಸಿದ್ಧತೆ: ಕುಮಾರ ಸ್ವಾಮಿಯವರ ನೇತೃತ್ವದಲ್ಲಿ ಸಭೆ ನಡೆಯಲಿದ್ದು, ಈಗ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ಕುಮಾರಸ್ವಾಮಿ ಯವರೇ ಮುಂದುವರಿಯುತ್ತಾರೆ. ಮುಂದೆ ನೋಡೋಣ, ಕಾರ್ಯಕರ್ತರು ಬಯಸಿದ ಹಾಗೆ ಆಗುತ್ತೆ. ಮಾರ್ಚ್, ಏಪ್ರಿಲ್‌ನಲ್ಲಿ ಜಿಪಂ - ತಾಪಂ. ಚುನಾವಣೆ ಬರಬಹುದು. ಆಗ ನಾನೇ ಕಾರ್ಯ ಕರ್ತರು, ಮುಖಂಡರ ಜೊತೆಗೆ ಚರ್ಚೆ ಮಾಡುತ್ತೇನೆ. ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತೇವೆ ಎಂದರು.

ಗ್ಯಾರಂಟಿ ಹೆಸರಲ್ಲಿ ಕಾಂಗ್ರೆಸ್ ಗಿಮಿಕ್: ಇದೇ ವೇಳೆ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ ನಿಖಿಲ್ ಅವರು, ರಾಜ್ಯ ಸರ್ಕಾರ ಬಸ್ ದರ, ಹಾಲಿನ ದರ ಏರಿಕೆ ಮಾಡಿದೆ. ಗ್ಯಾರಂಟಿ ಹೆಸರಲ್ಲಿ ಗಿಮಿಕ್ ಮಾಡುತ್ತಿದ್ದಾರೆ. ಎಂಪಿ ಚುನಾವಣೆಯಲ್ಲಿ 4 ತಿಂಗಳದ್ದು ಹಣ ಹಾಕಿದ್ದರು. ನನ್ನ ಚುನಾವಣೆಯಲ್ಲಿ 3 ತಿಂಗಳಿದ್ದಾಗ ಹಣ ಹಾಕಿದರು. ಜಿ.ಪಂ., ತಾ.ಪಂ. ಚುನಾವಣೆಯಲ್ಲಿ 6 ತಿಂಗಳದ್ದು ಹಾಕುತ್ತಾರೆ. ಇದು ಯಾರ ದುಡ್ಡು, ರಾಜ್ಯದ ಸಂಪತ್ತು. ಇದಕ್ಕೆಲ್ಲ ಜನ ಕಾಲಬಂದಾಗ ಉತ್ತರ ಕೊಡುತ್ತಾರೆ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ಯಾರು ಧೃತಿಗೆಡಬಾರದು: ಇದೇ ವೇಳೆ ಕಾರ್ಯ ಕರ್ತರೇ ನಮ್ಮ ಪಕ್ಷದ ಶಕ್ತಿ, ಎಲ್ಲರೂ ಪಕ್ಷದ ಜತೆ ನಿಂತು ಹೋರಾಟ ಮಾಡೋಣ, ನಾನು ಸೋತಿದ್ದೇನೆ ಎಂದು ಮನೆಯಲ್ಲಿ ಕೂರುವುದಿಲ್ಲ. ನಿಮ್ಮ ಜತೆ ನಾನು ಇರ್ತಿನಿ, ಪಕ್ಷ ಇರುತ್ತದೆ ಎಂದು ಕಾರ್ಯ ಕರ್ತರಿಗೆ ನಿಖಿಲ್ ಅವರು ಧೈರ್ಯ ತುಂಬಿದರು.

ಜೆಡಿಎಸ್ ಚನ್ನಪಟ್ಟಣ ತಾಲೂಕು ಅಧ್ಯಕ್ಷ ಜಯಮುತ್ತು, ಕುಕ್ಕೂರ ದೊಡ್ಡಿ ಜಯರಾಮ್, ನಿಡಗೋಡಿ ಬಾಬು, ಗೋವಿಂದಹಳ್ಳಿ ನಾಗರಾಜು, ಇಗ್ಗಲೂರು ಕುಮಾರ್, ಗರಕಹಳ್ಳಿ ಕೃಷ್ಣೆಗೌಡ ಹಾಗೂ ಪಕ್ಷದ ಅನೇಕ ಪ್ರಮುಖ ಮುಖಂಡರು ಹಾಜರಿದ್ದರು.

ಹೊನಚನಹಳ್ಳಿಯಲ್ಲಿ 16ನೇ ಶತಮಾನದ ದೀಪಸ್ತಂಭ ಶಾಸನ ಪತ್ತೆ

ಹೊಸಕೋಟೆ: ತಾಲೂಕಿನ ವಾಗಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊನಚನಹಳ್ಳಿ ಗ್ರಾಮದಲ್ಲಿ ಸುಮಾರು 16ನೇ ಶತಮಾನಕ್ಕೆ ಸೇರಿದ ದೀಪಸ್ತಂಭ ಶಾಸನವನ್ನು ಗುರುತಿಸಲಾಗಿದೆ. ತಾಲೂಕಿನಲ್ಲಿ ಪುರಾತತ್ವ ಮತ್ತು ಪ್ರಾಚ್ಯವಸ್ತು ಇಲಾಖೆಯಿಂದ ಕೈಗೊಂಡಿರುವ ಸವೇ ಕಾರ್ಯದಲ್ಲಿ ಶಾಸನ ಸಂಶೋಧಕ, ಇತಿಹಾಸ ಅಕಾಡೆಮಿಯ ಸದಸ್ಯ ವಿಜಯಶಂಕರ ಶಾಸನ ಗುರುತಿಸಿದ್ದಾರೆ. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳ ಮುಂದೆ ಇಂತಹ ದೀಪಸ್ತಂಭಗಳಿರುತ್ತದೆ. ಆದರೆ ಶಾಸನೋಕ್ತ ದೀಪಸ್ತಂಭ ಕಂಡು ಬರುವುದು ವಿರಳ ಇದೊಂದು ಹೊಸ ಸಂಶೋಧನೆ ಎಂದಿದ್ದಾರೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)
ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

2002ರ ಸರ್ಫೇಸಿ ಕಾಯಿದೆಯ ಕಲಂ 13(2)ರಡಿ ಡಿಮಾಂಡ್ ನೋಟಿಸ್

ಆದಾಗ್ಯೂ ಕೆಳಕಂಡಂತೆ ತಿಳಿಸಲಾದ ಸಾಲಗಾರರು, ಸಹ-ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರು ಆದ ನೀವು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನಿಂದ, ನಿಮ್ಮಗಳ ಸ್ಥಿರ ಆಸ್ತಿಗಳನ್ನು ಅಡಮಾನ ಮಾಡಿ ಸಾಲಗಳನ್ನು ಪಡೆದಿರುತ್ತೀರಿ. ನೀವೆಲ್ಲಾ ಸಾಲ ತೀರಿಸದೇ ವಿಫಲರಾಗಿ ಸುಸ್ತಿಯಾದುದರಿಂದ ನಿಮ್ಮ ಸಾಲದ ಖಾತೆಯನ್ನು ನಿಷ್ಕ್ರಿಯಾ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ, ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಭದ್ರತಾ ಸಾಲಿಗರಾಗಿ, ಕಾಯಿದೆಯಡಿ ಮತ್ತು ಸದರಿ ಕಾಯಿದೆಯ ಕಲಂ 13(2) ಮತ್ತು 2002ರ ಭದ್ರತಾ ಹಿತಾಸಕ್ತಿ ನಿಯಮಗಳ ನಿಯಮ 2ರ ಜೊತೆಗೆ ಒದಗಿಬಂದ ಅಧಿಕಾರಗಳಂತೆ, ಕೆಳಕಂಡಂತಿರುವ ವಿವರಗಳ ಪಟ್ಟಿಯ ಕಾಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ ಸಹ-ಸಾಲಗಾರರು/ ಜಾಮೀನುದಾರರು/ಅಡಮಾನದಾರರುಗಳಿಗೆ ಡಿಮಾಂಡ್ ನೋಟೀಸ್ ಜಾರಿಮಾಡಿ ನೋಟೀಸ್‌ನಲ್ಲಿ ನಮೂದಿಸಲಾದ ಬಾಕಿ ಸಾಲದ ಮೊಬಲಗು ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತವನ್ನು ಡಿಮಾಂಡ್ ನೋಟೀಸ್‌ನ ದಿನಾಂಕದಿಂದ 60 ದಿನಗೊಳಗಾಗಿ ತೀರಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಕೆಲವು ವಿವಿಧ ಕಾರಣಗಳಿಂದ ನೋಟೀಸ್‌ಗಳ ಸರ್ವ್ ಮಾಡಲಾಗಲಿಲ್ಲ.

ಕ್ರ. ಸಂ	ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ ಅಡಮಾನದಾರರ ಹೆಸರು	ಸಾಲದ ಸಂಖ್ಯೆ ಮತ್ತು ಸಾಲದ ಮೊತ್ತ	ಪರಿಮಾಣಕ್ಕೆ ಒಳಗಾಗುವ ಭದ್ರತಾ ಆಸ್ತಿಯ ವಿವರಣೆ	ಎನ್‌ಪಿಎ ಮತ್ತು ಡಿಮಾಂಡ್ ನೋಟೀಸ್‌ನ ದಿನಾಂಕ	ಬಾಕಿ ಮೊತ್ತ ರೂ./ಗಳಲ್ಲಿ ಕೆಳಕಂಡಂತೆ ಇದ್ದಂತೆ
1	1) ಶ್ರೀಮತಿ ಸ್ವಾತಿ ಬಿ, 2) ಶ್ರೀ ಸಂತೋಷ್ ಕುಮಾರ್ ಎಸ್‌ಎನ್	Loan Account No. 46459630001210 46459410000401 46459360005290 Loan Amount: Rs. 5,00,000/- Rs. 5,00.000/- Rs. 30.000/-	ಅಡಮಾನಿತ ಸ್ಥಿರಾಸ್ತಿ: ಸಕಲ ಸಮಸ್ತವೂ ಸೇರಿದ ಆಸ್ತಿಯ ಕ್ರ.ಸಂ. 16, ನೆಲವಾಗಿಲು ಗ್ರಾಮ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪ್ರಸ್ತುತ ನೆಲವಾಗಿಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಚಿಕ್ಕಣ್ಣ ರವರ ಮನೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಶಂಕರ್ ರವರ ಖಾಲಿ ನಿವೇಶನ, ದಕ್ಷಿಣಕ್ಕೆ: ರಸ್ತೆ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 42 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 60 ಅಡಿ.	Date of NPA: 29-12-2024 Demand Notice Date: 06-01-2025	ರೂ. 8,93,554.74 (ಎಂಟು ಲಕ್ಷದ ತೊಂಭತ್ತಮೂರು ಸಾವಿರದ ಐದುನೂರ ಐವತ್ತನಾಲ್ಕು ರೂ. ಮತ್ತು ಎಪ್ಪತ್ತನಾಲ್ಕು ಪೈಸೆ ಮಾತ್ರ) ಬಾಕಿ 05-01-2025 ರಂದು ಇದ್ದಂತೆ
2	1) ಶ್ರೀ ಸಿದ್ದರಾಮ ನಾಯಕ್, 2) ಶ್ರೀಮತಿ ಅಮ್ಮಣ್ಣಿ ಬಾಯಿ	Loan Account No. 45350430000061 Loan Amount: Rs. 3,70,000/-	ಅಡಮಾನಿತ ಸ್ಥಿರಾಸ್ತಿ: ಸಕಲ ಸಮಸ್ತವೂ ಸೇರಿದಂತೆ ಖಾನೆಸುಮಾರಿ ಸಂ. 245/295/02, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 9.146 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 10.975 ಮೀಟರ್, ಉಯ್ಯಂಬಳ್ಳಿ ಗ್ರಾಮಪಂಚಾಯಿತಿ ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಉಮೇಶ್ ರವರಿಗೆ ಸೇರಿದ ಮನೆ, ಉತ್ತರಕ್ಕೆ: ಸ್ವಂತ ಆಸ್ತಿಯ ಉಳಿಕೆ ಭಾಗ, ದಕ್ಷಿಣಕ್ಕೆ: ಸಿದ್ದರಾಜು ರವರಿಗೆ ಸೇರಿದ ಮನೆ.	Date of NPA: 02-12-2024 Demand Notice Date: 06-01-2025	ರೂ. 3,72,435.31 (ಮೂರು ಲಕ್ಷದ ಎಪ್ಪತ್ತೆರಡು ಸಾವಿರದ ನಾಲ್ಕು ನೂರ ಮೂವತ್ತೈದು ರೂ. ಮತ್ತು ಮೂವತ್ತೊಂದು ಪೈಸೆ ಮಾತ್ರ) ಬಾಕಿ 05-01-2025 ರಂದು ಇದ್ದಂತೆ

ಆದುದರಿಂದ ಕಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರರು ಮತ್ತು ಅಡಮಾನದಾರರುಗಳಿಗೆ ಸೂಚನೆ ನೀಡಿ ಕರೆ ನೀಡುವುದೇನೆಂದರೇ ಸಂಬಂಧಿಸಿದ ಸಾಲಗಾರರು/ಸಹಸಾಲಗಾರರ ಕಲಂ 6ರ ಎದುರಾಗಿ ಸೂಚಿಸಲಾದ ದಿನಾಂಕದಂದು ಬಾಕಿ ಇದ್ದಂತೆ ಮತ್ತು ಪಾವತಿಸಬೇಕೆಂಬುದಾಗಿ ಕೊಡು ಬಂದ ಕಲಂ 6ರಲ್ಲಿ ತೋರಿಸಿದಂತೆ ಬಾಕಿ ಮೊತ್ತವನ್ನು ಸೂಚನೆ ಪ್ರಕಟಿಸಿದ 60 ದಿನಗಳ ಒಳಗಾಗಿ ಪಾವತಿ ಮಾಡಲೇಬೇಕು. ಒಟ್ಟಾರೆ ಮೊತ್ತ ಜೊತೆಗೆ ತದನಂತರದ ಬಡ್ಡಿ ಮತ್ತು ಪಾವತಿಯಾಗುವ ದಿನಾಂಕದವರೆಗೆ ಪಾವತಿಸಬೇಕಾದ ಇತರೆಗಳನ್ನು ಸೇರಿದ ಬಾಕಿ ಸಾಲದ ಮೊತ್ತ ಪಾವತಿಯಾಗದೇ ಇದ್ದ ಪಕ್ಷದಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಆದ ನಾವು ಕಲಂ 4ರಲ್ಲಿ ತೋರಿಸಲಾದ ಆಸ್ತಿಗಳ ಮೇಲೆ ಭದ್ರತಾ ಹಿತಾಸಕ್ತಿಯನ್ನು ಜಾರಿ ಮಾಡುವ ಸಮಂಜಸ ಕ್ರಮ ಕೈಗೊಳ್ಳಲಾಗುವುದು ಅನಿವಾರ್ಯವಾಗುತ್ತದೆ. ಸದರಿ ಫೈನಾನ್ಸಿಯಲ್‌ನ ಸಾಲಗಾರರ/ಸಹ-ಸಾಲಗಾರರ/ ಜಾಮೀನುದಾರರ/ಅಡಮಾನದರರ ವಿರುದ್ಧ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಗೆ ಲಭ್ಯವಾಗುವ ಅಂತಹ ಹಕ್ಕುಗಳು ಮತ್ತು ಪರಿಹಾರಗಳ ಬಗ್ಗೆ ಪೂರ್ವಾಗ್ರಹವಿಲ್ಲದೇ ಈ ನೋಟೀಸನ್ನು ಹೊರಡಿಸಲಾಗಿದೆ. ನಿಮಗೆ ನೀಡುವ ಎಚ್ಚರಿಕೆಯೇನೆಂದರೇ ಸದರಿ ಕಾಯಿದೆಯ ಕಲಂ 13(13)ರನ್ವಯ ನೀವು ಮೇಲಿನ ಭದ್ರತೆಯ ಬಗ್ಗೆ ಯಾವುದೇ ವ್ಯವಹಾರ ಮಾಡದಂತೆ/ ಭದ್ರತೆಯನ್ನು ವಿಲೇವಾರಿ ಮಾಡದಂತೆ ಅಥವಾ ಭದ್ರತಾ ಆಸ್ತಿಯನ್ನು ಭದ್ರತಾ ಸಾಲಿಗರ (ಸೆಕ್ಯೂರ್ಡ್ ಕ್ರೆಡಿಟರ್) ಪೂರ್ವಾನುಮತಿಯಿಲ್ಲದೇ ಮಾರಾಟ ಮಾಡದಂತೆ ಅಥವಾ ವರ್ಗಾಯಿಸದಂತೆ ಅಥವಾ ಇತರೆ ರೀತಿಯಲ್ಲಿ ಏನೂ